ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,
ತಿ. ನರಸೀಪುರ.

ಸಿ ಸಿ ಸಂಖ್ಯೆ: 2111/2022

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ ನರಸೀಪುರ ಆದ ನಾನು

ಕಿಜಾರ್ ಅಹಮದ್ ಬಿನ್ ಲೇ ಕುಬುಲ್ ಅಹಮದ್
42 ವರ್ಷ, ವಾಸಃ ನಂಃ 10, 3 ನೇ ಕ್ರಾಸ್, ಸಿ ರಸ್ತೆ,
ರಾಯಪುರಂ, ಜೆ ಜೆ ಆರ್ ನಗರ, ಬೆಂಗಳೂರು.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪವೇನೆಂದರೆ :-

ಮೊದಲನೆಯದಾಗಿ, ಆರೋಪಿತರಾದ ನೀವು ಚಾಸಾ-1/ಶ್ರೀಮತಿ ಜಾಕಿಯಾ ಬೇಗಂ ರವರನ್ನು ದಿಃ 22.07.2020 ರಂದು ಚಾಸಾ-2 ರಿಂದ 5 ರವರ ಸಮಕ್ಷಮ ಮೈಸೂರಿನ ಮಹಿಳಾ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಬನ್ನೂರಿನ ಚಾಸಾ-2/ಮುನೀರ್ ಜಾನ್ ರವರ ಮನೆಯಲ್ಲಿ ವಿವಾಹವಾಗಿದ್ದು, ನಂತರ ಚಾಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆ ತರುವಂತೆ ಹಾಗೂ ಬೇರೆಯವರನ್ನು ಮದುವೆಯಾಗಿದ್ದರೆ ಇನ್ನು ಹೆಚ್ಚಿನ ವರದಕ್ಷಿಣೆ ಸಿಗುತ್ತಿತ್ತು ಎಂದು ಅವ್ಯಾಚ್ಯ ಶಬ್ದಗಳಿಂದ ಬೈಯ್ದು ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದ್ದು, ನಂತರ ದಿಃ 20.02.2022 ರಂದು ಚಾಸಾ-2 ರವರ ಮನೆಯಲ್ಲಿ ಪಂಚಾಯಿತಿ ಮಾಡಿಸಿ ತಿಳುವಳಿಕೆ ಹೇಳಿದ್ದರೂ ಕೂಡ ನೀವು ಚಾಸಾ-1 ರವರಿಗೆ ಕಿರುಕುಳ ನೀಡಿ ದೈಹಿಕ ಮತ್ತು ಮಾನಸಿಕವಾಗಿ ಕಿರುಕುಳ ನೀಡುವ

ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 498–A ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ಸಮಯದಂದು ಆರೋಪಿಯಾದ ನೀವು ಚಾಸಾ–1ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ ಭಂಗಪಡಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕದಂದು ಆರೋಪಿತರಾದ ನೀವು ಚಾಸಾ–1ರವರಿಗೆ ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕದಂದು ಆರೋಪಿತರಾದ ನೀವು ಚಾಸಾ–2ರವರಿಂದ ವರದಕ್ಷಿಣೆಯಾಗಿ ರೂ. 2 ಲಕ್ಷ ನಗದು, ಒಂದು ಚಿನ್ನದ ಉಂಗುರ ಮತ್ತು ವಾಚನ್ನು ಪಡೆಯುವ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 3 ಮತ್ತು 4 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 05–07–2023.

ಹಿರಿಯ ವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ. ನರಸೀಪುರ.

ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,
ತಿ ನರಸೀಪುರ

<u>ಸಿ ಸಿ ಸಂಖ್ಯೆ: *2111/2022*</u>

**<u>ದೋಷಾರೋಪಣೆ</u>**

ಕಿಜಾರ್ ಅಹಮದ್ ಬಿನ್ ಲೇ ಕುಬುಲ್ ಅಹಮದ್
42 ವರ್ಷ, ವಾಸಃ ನಂಃ 10, 3 ನೇ ಕ್ರಾಸ್, ಸಿ ರಸ್ತೆ,
ರಾಯಪುರಂ, ಜೆ ಜೆ ಆರ್ ನಗರ, ಬೆಂಗಳೂರು.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ಇಲ್ಲಾ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 05.07.2023.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.